ರಾಜ್ಯದಲ್ಲಿ ಮೀನುಗಾರಿಕೆ ಅಭಿವೃದ್ಧಿ

4203 (4923) : ಶ್ರೀ ಹೆಚ್.ಎಸ್. ಶಂಕಲಿಂಗೇಗೌಡ (ಚಾಮರಾಜ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೀನುಗಾರಿಕೆ ಮುಖಾಂತರ ಕಳೆದ ಐದು ವರ್ಷಗಳಲ್ಲಿ ಎಷ್ಟು ಲಾಭ ನಷ್ಟ ಆಗಿದೆ; ವಿವರ ನೀಡುವುದು?

ಆ) ಮೀನುಗಾರಿಕೆ ಅಭಿವೃದ್ಧಿಗಾಗಿ ಇದುವರೆಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ? (ವೆಚ್ಚದ ವಿವರಗಳೊಡನೆ ಮಾಹಿತಿ ನೀಡುವುದು)

ಇ) ಮೀನುಗಾರಿಕೆಗೆ ಸಂಬಂಧಿಸಿದಂತೆ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳೇನು? (ವಿವರ ನೀಡುವುದು)

ಶ್ರೀ ವಸಂತ ಎ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಸಂಪೂರ್ಣ ಮೀನುಗಾರಿಕೆಗೆ ಸಂಬಂಧಿಸಿದಂತೆ ಲಾಭ ಮತ್ತು ನಷ್ಟವನ್ನು ಅಂದಾಜು ಮಾಡಲು ಆಗುವುದಿಲ್ಲ. ಆದಾಗ್ಯೂ, ರಾಜ್ಯದಲ್ಲಿನ ಕಳೆದ ಐದು ಮೀನು ಉತ್ಪಾದನೆ ಮತ್ತು ಮೌಲ್ಯದ ವಿವರಗಳು ಈ ಕೆಳಕಂಡಂತಿರುತ್ತವೆ.

ವರ್ಷ	ಕರಾವಳಿ ಉತ್ಪಾದನೆ (ಲಕ್ಷ ಮೆಟ್ರಿಕ್ ಟನ್)	ಕರಾವಳಿ ಮೌಲ್ಯ (ಕೋಟಿ ರೂ.ಗಳಲ್ಲಿ)	ಒಳನಾಡು ಉತ್ಪಾದನೆ (ಲಕ್ಷ ಮೆಟ್ರಿಕ್‌ಟನ್)	ಒಳನಾಡು ಮೌಲ್ಯ ಕೋಟಿ ರೂ.ಗಳಲ್ಲಿ
1998–99	1.606	210.09	1.184	296.04
1999–00	1.656	236.84	1.266	316.61
2000–01	1.779	247.99	1.274	318.67
2001–02	1.284	199.42	1.211	302.99
2002–03	1.801	336.53	0.862	205.65

ಆ) ಕಳೆದ ಐದು ವರ್ಷಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಯ ವಿವರ	ಅಂದಾಜು ವೆಚ್ಚ
1.	ಜಾಗುಬೆಳೆಳು ಪ್ರದೇಶದಲ್ಲಿ ಮೀನು ಸಾಕಾಣಿಕೆ ಕೊಳಗಳನ್ನು ನಿರ್ಮಿಸಲು ಸಹಾಯ	39.00
2.	ಎನ್.ಸಿ.ಡಿ.ಸಿ ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಒಳನಾಡು ಮೀನುಗಾರಿಕೆ ಅಭಿವೃದ್ಧಿ	25.00

1	2	3
3.	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಸಣ್ಣ ಕೆರೆಗಳನ್ನು ಅಭಿವೃದ್ಧಿ ಪಡಿಸುವುದು, ತರಬೇತಿ ನೀಡುವುದು.	653.51
4.	ಮೀನು ಕೊಳಗಳ ನಿರ್ಮಾಣಕ್ಕಾಗಿ ಸಹಾಯ ಯೋಜನೆಯಡಿ ಸ್ವಂತ ಜಮೀನಿನಲ್ಲಿ ಮೀನು ಸಾಕಾಣಿಕೆ ತೆಗೆದುಕೊಳ್ಳಲು ಸಹಾಯ ಧನ	18.47
5.	ಸಿಹಿ ನೀರು ಸೀಗಡಿ ಕೃಷಿ ಕೈಗೊಳ್ಳಲು ಸಹಾಯ ನೀಡುವುದು	6.29
6.	ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಸಹಾಯ	24.89
7.	ಸಾಂಪ್ರದಾಯಿಕ ದೋಣಿಗಳಿಗೆ ಔಟ್ ಬೋರ್ಡ್ ಮೋಟಾರ್ಸ್ ಹಾಗೂ ಇನ್‌ಬೋರ್ಡ್ ಮೋಟಾರ್ಸ್ ಅಳವಡಿಸಿ ಯಾಂತ್ರೀಕರಿಸಲು ಸಹಾಯ	59.83
8.	ಯಾಂತ್ರೀಕೃತ ದೋಣಿಗಳು ಬಳಸುವ ಇಂಧನಕ್ಕೆ ಕೇಂದ್ರ ಅಬ್ಕಾರಿ ಶುಲ್ಕದಿಂದ ರಿಯಾಯಿತಿ ನೀಡುವುದು	507.66
9.	ದೂರ ತೀರದ ಮೀನುಗಾರಿಕೆ ದೋಣಿಗಳಿಗೆ ಫಿಶ್‌ಫೈಂಡರ್ಸ್, ರೇಡಿಯೋ ಟೆಲಿಫೋನ್, ಜಿ.ಪಿ.ಎಸ್. ನ್ಯಾವಿ ಗೇಟರ್ಸ್ ಇತ್ಯಾದಿಗಳನ್ನು ಖರೀದಿಸಲು ನೆರವು	24.22
10.	ಪ್ರತಿ ವರ್ಷ 50,000 ಕಿ.ಲೀ ರಾಜ್ಯ ಮಾರಾಟಕರ ರಹಿತ ಡೀಸೆಲ್‌ನ್ನು ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಸರಬರಾಜು ಮಾಡುವುದು.	—
11.	ಎನ್.ಸಿ.ಡಿ.ಸಿ ನೆರವಿನ ಸಮಗ್ರ ಕರಾವಳಿ ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಕರಾವಳಿ ಮೀನುಗಾರಿಕೆ ಅಭಿವೃದ್ಧಿ	830.49
12.	ಮೀನು ಮಾರುಕಟ್ಟೆಗಾಗಿ ಮೀನುಗಾರರಿಗೆ ಸಹಾಯ ಯೋಜನೆಯಡಿ ಬೈಸಿಕಲ್ಲು ಮತ್ತು ಐಸ್ ಬಾಕ್ಸ್ ಖರೀದಿಸಲು ಸಹಾಯ ನೀಡುವುದು.	11.03
13.	ಮತ್ಸ್ಯವಾಹಿನಿ ಯೋಜನೆಯಡಿ ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತವಾಗಿ ಸಾಗಿಸಲು ತ್ರಿಚಕ್ರ ವಾಹನ ಖರೀದಿಸಲು ಸಹಾಯ ನೀಡುವುದು.	7.25
14.	ಮೀನುಗಾರಿಕೆ ಬಂದರುಗಳ ಹಾಗೂ ಇಳಿದಾಣಗಳ ನಿರ್ಮಾಣ	2113.17
	ಒಟ್ಟು	**4320.81**

ಇ) ಮೀನುಗಾರಿಕೆಗೆ ಸಂಬಂಧಿಸಿದಂತೆ ಅಭಿವೃದ್ಧಿಗಾಗಿ ಕಳೆದ 5 ವರ್ಷಗಳಲ್ಲಿ ಈ ಕೆಳಕಂಡ ನೂತನ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ರಾಜ್ಯದ ದಾವಣಗೆರೆ, ಹಾವೇರಿ, ಶಿವಮೊಗ್ಗ, ಧಾರವಾಡ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ರೂ. 13.40 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ಮೂಲಭೂತ ಸೌಕರ್ಯಗಳಾದ ಉತ್ಪಾದನ ಘಾರಂಗಳನ್ನು ಸೃಜಿಸಲು, ಮೀನುಗಾರಿಕೆ ಪರಿಕರಗಳನ್ನು ಪೂರೈಸಲು, ತರಬೇತಿ ಮತ್ತು ವಿಸ್ತರಣಾ ಸೇವೆಗಳನ್ನು ನೀಡಲು, ಮಾರಾಟ ನೆರವು ಹಾಗೂ ಕೆರೆಗಳ ಅಭಿವೃದ್ಧಿ ಮುಂತಾದ ಘಟಕಾಂಶವನ್ನು ಹೊಂದಿರುತ್ತದೆ.
2. ಕೇಂದ್ರ ವಲಯ ಪ್ರಾಯೋಗಿಕ ಜಲಾಶಯಗಳ ಅಭಿವೃದ್ಧಿ ಯೋಜನೆಯಡಿ ಮಾಕೋನಹಳ್ಳಿ ಹಾಗೂ ಹೆಸರಘಟ್ಟ ಜಲಾಶಯಗಳನ್ನು ರೂ. 16.25 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ.
3. "ಮತ್ಸ್ಯವಾಹಿನಿ" ಯೋಜನೆಯಡಿ ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತವಾದ ಸಾಗಾಣಿಕೆಗಾಗಿ ಮೀನುಗಾರರಿಗೆ ತ್ರಿಚಕ್ರ ವಾಹನವನ್ನು ಖರೀದಿಸಲು ಶೇಕಡ 25 ರಷ್ಟು ಗರಿಷ್ಠ ರೂ. 25,000/--ಗಳ ಸಹಾಯ ಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.
4. ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿ ಯೋಜನೆಯಲ್ಲಿ ಮೀನುಮರಿ ಉತ್ಪಾದನಾ ಕೇಂದ್ರಗಳ ಆಧುನೀಕರಣ.

ಹಿಂದುಳಿದ ವರ್ಗಗಳ ಆಯೋಗದಲ್ಲಿ ಮುಂದೆ ಇರತಕ್ಕ ಅರ್ಜಿಗಳು

4204 (4928) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಹಾಗೂ ಪೂರ್ಣಸದಸ್ಯರ ನೇಮಕ ಮಾಡಲಾಗಿದೆಯೇ; ಅಂತಹವರುಗಳ ವಿದ್ಯಾರ್ಹತೆ ಜಾತಿವಾರು ಹೆಸರು ಸಹಿತ ಅವರ ಸಂಖ್ಯೆಯ ವಿವರ ಒದಗಿಸುವುದು.

ಆ) ಆಯೋಗದ ಸದಸ್ಯರ ಆಯ್ಕೆಗೆ ಅನುಸರಿಸುವ ಮಾನದಂಡಗಳೇನು?

ಇ) ಈ ಆಯೋಗದ ಮುಂದೆ ಇತ್ಯರ್ಥವಾಗಬೇಕಾಗಿರುವ ಅರ್ಜಿಗಳೆಷ್ಟು?

ಈ) ಅಂತಹ ಅರ್ಜಿಗಳಲ್ಲಿ ಎಷ್ಟನ್ನು ಪರಿಶೀಲಿಸಿ, ತೀರ್ಮಾನ ಕೈಗೊಂಡಿದ್ದಾರೆ (ವಿವರ ಒದಗಿಸುವುದು)

ಉ) ಈಗಿನ ಆಯೋಗದ ಅಧಿಕಾರಾವಧಿ ಯಾವಾಗ ಮುಗಿಯುತ್ತದೆ? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಹೌದು, ಅಧ್ಯಕ್ಷರು ಮತ್ತು ಸದಸ್ಯರ ವಿವರಗಳು ಹೀಗಿವೆ.